# ಬದುಕೇ ಕಲೆಯಾಗಿ ಕಲೆ ನೈತಿಕ ಶಕ್ತಿಯಾಗಿ



**ಎಂ.ಎಸ್. ಆಶಾದೇವಿ**

**ಹೆಣ್ಣಾಗಿ ನನ್ನ ಅನುಭವಗಳನ್ನು ಯಾವ ಸೆನ್ಸಾರ್‌ಷಿಪ್, ಅದರಲ್ಲೂ ಸ್ವಸೆನ್ಸಾರ್‌ಷಿಪ್ ಇಲ್ಲದೆ ಅಭಿವ್ಯಕ್ತಿಸಲು ಸಾಧ್ಯವಾಗುವುದಾದರೆ, ನನ್ನೆಲ್ಲ ಒಳ-ಹೊರ ಸಂಕೋಚಗಳನ್ನು ಮೀರಿಕೊಂಡು ಬರೆಯಬಲ್ಲೆನಾದರೆ, ನನ್ನ ಅನುಭವಗಳ ಅಧಿಕೃತತೆಯಲ್ಲಿ ನನಗೆ ಸಂಪೂರ್ಣ ನಂಬಿಕೆಯಿದೆ ಎಂದಾದರೆ, ನಾನು ಹೊಸ ಭಾಷೆಯನ್ನು ಕಟ್ಟುತ್ತಿದ್ದೇನೆ ಎಂದರ್ಥ.**

**–ಆಡ್ರಿನ್ ರಿಚ್**

ಕನ್ನಡ, ಭಾರತ ಎಂದೇಕೆ, ಜಗತ್ತಿನಾದ್ಯಂತ ವಿಪುಲವಾಗಿ ಬರುತ್ತಿರುವ ಮಹಿಳಾ ಆತ್ಮಕಥನಗಳನ್ನು ನೋಡಿದರೆ ಹೆಣ್ಣು 'ಹೊಸ ಭಾಷೆ'ಯ ಸೃಷ್ಟಿಯಲ್ಲಿ ನಿರತಳಾಗಿರುವುದು ಎದ್ದು ಕಾಣುತ್ತಿದೆ. ಈ ಹೊಸಭಾಷೆಯ ವ್ಯಾಕರಣವು ಏಕಕಾಲಕ್ಕೆ ಅವಳು ತಾನೂ ಕಲಿಯುತ್ತಾ ಗಂಡಾಳಿಕೆಗೂ ಅದನ್ನು ಕಲಿಸಲು ಯತ್ನಿಸುತ್ತಿರುವುದು ನಮ್ಮ ಅನುಭವಕ್ಕೆ ಬರುತ್ತದೆ. ಇದೊಂದು ಇಬ್ಬಾಯಖಡ್ಗದ ಪಯಣ. ಇಲ್ಲಿ ಖಡ್ಗ ಎನ್ನುವ ರೂಪಕವನ್ನು ಬಳಸುವುದು ಅನಿವಾರ್ಯ. ಏಕೆಂದರೆ ಹಳೆಯದನ್ನು ಪಕ್ಕಕ್ಕೆ ಸರಿಸುವುದಕ್ಕಿಂತ ಕತ್ತರಿಸಿ ಎಸೆಯುವುದೇ ಸರಿಯಾದ ಕ್ರಮ ಎನ್ನುವುದು ಹಿಂಸಾತ್ಮಕವಾಗಿ ಕಂಡರೂ, ರೋಸಿ ಹೋದ ಮನಸ್ಸು ಈ ಆಲೋಚನೆಯ ಕಡೆಗೆ ಸಹಜವಾಗಿಯೇ ವಾಲುತ್ತದೆ. ಜಾಣ ಕಿವುಡು, ಜಾಣ ಕುರುಡಿನ ಹಾಗೆಯೇ ಜಾಣ ಮರೆವು ಕೂಡ ಗಂಡಾಳಿಕೆಯ ಒಂದು ಕಾರ್ಯಮಾದರಿಯೇ ಆಗಿದೆ.

ಹೆಣ್ಣಿನ ಅಭಿವ್ಯಕ್ತಿಯನ್ನು ಕುರಿತಂತೆ ಪೂರ್ವಗ್ರಹಗಳನ್ನು ಮರೆತಂತೆ ಅನೇಕ ಬಾರಿ ನಟಿಸಲಾಗುತ್ತದೆ. ನಾವೂ ನಂಬಿದಂತೆ ನಟಿಸಬೇಕು ಎಂದೂ ಕೂಡ ಅದು ಬಯಸುತ್ತಿರುತ್ತದೆ.

ಮರೆತೇ ಇಲ್ಲದ, ಮರೆಯಲು ಅಥವಾ ಬಿಟ್ಟುಬಿಡಲು ಮನಸಾ ಸಿದ್ಧವಿಲ್ಲದ ದೃಷ್ಟಿಕೋನಗಳು ಮತ್ತು ಧೋರಣೆಗಳು ಮತ್ತದೇ ಯಥಾಸ್ಥಿತಿಯ ಯಥಾವತ್ತಾದ ಮುಂದುವರಿಕೆಯಾಗುತ್ತಿರುವ ಸಂದರ್ಭಗಳು ಈಗಲೂ ಮೇಲುಗೈ ಪಡೆದಿವೆ. ಇಂಥ ಪರಿಸ್ಥಿತಿಯಲ್ಲಿ ಹೊಸ ಭಾಷೆಯನ್ನು ರಾಜಕೀಯ ಕಾರಣಗಳಿಗಾಗಿ ಒಪ್ಪುವುದಾಗಲೀ, ತೋರಿಕೆಯ ಮನ್ನಣೆಯನ್ನು ನೀಡುವುದಾಗಲೀ ಅಷ್ಟೇನೂ ಉಪಯುಕ್ತವಲ್ಲ. ಆದರೆ ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ, ಆರಂಭದಲ್ಲಿ ಇದೂ ಅಡ್ಡಿಯಿಲ್ಲ ಎಂದೇ ಅನ್ನಿಸಿಬಿಡುತ್ತದೆ.

ಹೆಣ್ಣಿನ ಅಭಿವ್ಯಕ್ತಿಯನ್ನು ಕುರಿತಂತೆ ನಡೆಯುತ್ತಿರುವ ಅಧ್ಯಯನಗಳು, ವಿಮರ್ಶೆ, ಮಾತುಕತೆ ಎಲ್ಲವೂ ಸಮಸ್ಯಾತ್ಮಕ ಎನ್ನಿಸುವುದು ಮೂಲತಃ ಈ ಕಾರಣಕ್ಕೆ. ಅದರಲ್ಲೂ ಘನವಾದ ಕೃತಿಯೊಂದು ಬಂದಾಗಲೂ